Regd B G No. 155

Sri "SATYAVADI"
— DAILY —
MYSORE 4
47 th Year
೪೭ ನೇ ವರ್ಷ

ಸ್ಥಾಪಕರು— ಅರಮನೆ ಸಿಂಸ್ಕೇದಾರ್ ಎಂ. ಎ ಸುಬ್ಬರಾಯುರು 2 ನೇ ಪು.

5—9—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಯನ್ನು ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow
ಗೋಸಂರಕ್ಷಣೆ ಮಾಡಿ

ತ್ರಿಪುರಾ ಬಳಿ ಪಾಕಿಸ್ತಾನದ ಭಾರಿ ಸೇನೆ ಜಮಾವಣೆ

ನವದೆಹಲಿ 4 — ತ್ರಿಪುರದಲ್ಲಿ ಸಬ್ರೂಂಗೆ ಎದುರಿನಲ್ಲಿ ರಾಮಘರಿನ ಸೇನಾ ಠಾಣ್ಯದಲ್ಲಿ ಭಾರಿ ಸೇನಾ ಸಂಗ್ರಹಣೆ ಪಾಕಿಸ್ತಾನದಿಂದ ಆಗಿದೆ ಎಂದು ಸರ್ಕಾರಕ್ಕೆ ವರದಿಗಳು ಬಂದಿರುವದಾಗಿ ರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣ ಮೆನನ್ ಈ ದಿನ ಲೋಕಸಭೆಯಲ್ಲಿ ತಿಳಿಸಿದರು

ಭಾರತಕ್ಕೆ ಸಾಲಾ

ನವದೆಹಲಿ 4— ಭಾರತದ ತೃತೀಯ ಯೋಜನೆಯಲ್ಲಿ ಸೇರಿರುವ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿಂದು ಬ್ರಿಟಿಷ್ ಸರಕಾರ ನೀಡುವ 180 ಲಕ್ಷ ಪೌಂಡು ಮೊತ್ತದ ಇನ್ನೆರಡು ಸಾಲಗಳ ಸಂಬಂಧವಾದ ಒಪ್ಪಂದಗಳಿಗೆ ಈ ದಿನ ಇಲ್ಲಿ ಸಹಿ ಬಿತ್ತು.

ಶಾಲಾ ಶಿಕ್ಷಕರಿಗೆ ಪ್ರಶಸ್ತಿ

ನವದೆಹಲಿ 4— ಶಿಕ್ಷಕರ ರಾಷ್ಟ್ರೀಯ ಪ್ರಶಸ್ತಿ ಕಾರ್ಯಕ್ರಮ ಯೋಜನೆ ಮೇರೆಗೆ 1962-63 ನೇ ವರ್ಷದಲ್ಲಿ ಮೈಸೂರು ರಾಜ್ಯದಲ್ಲಿ 5 ಮಂದಿ ಪ್ರಶಸ್ತಿ ಪಡೆದಿರುವರು.

ಸರ್ಕಸ್ಸಿನಲ್ಲಿ ಸಾವು

ಬೆಂಗಳೂರು 4 — ಜಮಿನಿ ಸರ್ಕಸ್ಸಿನ ಈ ಮಧ್ಯಾನ್ಹದ ಆಟ ನಡೆಯುತ್ತಿದ್ದಾಗ ಸರ್ಕಸ್ಸಿನ ರಿಂಗ್ ಮಾಸ್ಟರ್ ನಾರಾಯಣ ಪವರ್ ಕುದುರೆಯಿಂದ ಬಿದ್ದು ಗಾಯಗೊಂಡು ಆಸ್ಪತ್ರೆಗೆ ಸಾಗಿಸಲ್ಪಟ್ಟು ಸತ್ತುಹೋದನು

ಜಕಾರ್ತಾ 4 — ಕೊರಿಯಾ 2ಹೇಲೆ ನಡೆದ ಫುಟ್ಬಾಲ್ ಪಂದ್ಯದಲ್ಲಿ —1 ಮತಗಳಿಂದ ಭಾರತ ಗೆಲುವು ಪಡೆಯಿತು.

ಬೆಂಗಳೂರು 4— ಬೆಂಗಳೂರು ಜಿಲ್ಲೆಯಲ್ಲಿ ಪ್ರವಾಹ ಸಂತ್ರಸ್ಥರಿಗೆ ಮೈಸೂರು ಸರಕಾರವು 1-5 ಲಕ್ಷ ರೂಗಳನ್ನು ಬಿಡ್ಡಿಯಿಲ್ಲದ ಸಾಲ ಕೊಟ್ಟಿದೆ.

ಚಿಕ್ಕಬಳ್ಳಾಪುರದಲ್ಲಿ ವಿಪರೀತ ಮಳೆಯಾಗುತ್ತಿದ್ದು ನಂದೀಬೆಟ್ಟದ ಮೇಲಿಂದ ಬಿಳುತ್ತಿರುವ ಮಳೆಯಿಂದ ಪೆನ್ನಾರು ನದಿ ಪ್ರವಾಹ ಹೆಚ್ಚಿ ಗೌರಿಬಿದನೂರು ತಾಲ್ಲೂಕಿದಲ್ಲಿ ಕೆಳಮಟ್ಟ ಭಾಗಗಳಲ್ಲಿ ನೀರು ತುಂಬಿದೆ.

ಪಾಂಡಿಚೇರಿಯಲ್ಲಿ ಹೊಸದೊಂದು ಹಡಗುಕಟ್ಟೆಯನ್ನು ನಿರ್ಮಿಸಲಾಗುತ್ತಿದೆ

ಅಧ್ಯಕ್ಷರಿಗೆ 74

ಭಾರತ ಅಧ್ಯಕ್ಷ ಡಾ|| ಎಸ್ ರಾಧಾಕೃಷ್ಣರಿಗೆ ಇಂದು 74 ವರ್ಷಗಳಾದವು

ಚೀನಾಕ್ಕೆ ಆಹ್ವಾನ

ನವದೆಹಲಿ 4 — ಮಾತುಕತೆಗಳಿಗಾಗಿ ಓರ್ವ ಪ್ರತಿನಿಧಿಯನ್ನು ಕಳಿಸುವಂತೆ ಚೀನಾಕ್ಕೆ ಭಾರತ ಆಹ್ವಾನಿಸಿದೆ. ಗಡಿ ಪ್ರಶ್ನೆಯ ಪರಿಶೀಲನೆಗೆ ಮುನ್ನ ಲಡಕ್ ಪ್ರದೇಶದ ಸ್ಟೇಟಸ್ ಕೊ ಒಪ್ಪಬೇಕೆಂದು ಭಾರತ ತಿಳಿಸಿದೆ

20 ಸಾವಿರಕ್ಕೆ ಮಿಂಚಿ ಸಾವು

ಇರಾನಿನಲ್ಲಿ ಆದ ಭೂಕಂಪದಿಂದ 20 ಸಾವಿರ ಮಂದಿಗೆ ಮೇಲ್ಪಟ್ಟು ಮರಣಹೊಂದಿರುವರು

ಆಗಲೇ 4 ನೇ ಯೋಜನೆ !

ವಿದೇಶ 4— 4 ನೇ ಪಂಚವಾರ್ಷಿಕ ಯೋಜನೆಯ ಪೂರ್ವಭಾವಿ ಕಾರ್ಯ ಈಗಿನಿಂದಲೇ ಪ್ರಾರಂಭವಾಗುವುದೆಂದು ಭಾರತ ಸರಕಾರದ ಪ್ಲಾನಿಂಗ್ ಮಂತ್ರಿ ಶ್ರೀ ನಂದಾ ಹೇಳಿದರು.

ಮನವಿ

ಬೆಂಗಳೂರು 4— ನಿದ್ಯಾಭ್ಯಾಸದಲ್ಲಿ ಫೀಜಿನ ರಿಯಾಯಿತಿಯನ್ನು ವಾರ್ಷಿಕ ಉತ್ಪತ್ತಿಯನ್ನು ರೂ 2400 ರಿಂದ 4000 ಕ್ಕೆ ಹೆಚ್ಚಿಸಬೇಕೆಂದು ಬೆಂಗಳೂರು ವಿದ್ಯಾರ್ಥಿ ಸಂಗದವರು ಸರ್ಕಾರವನ್ನು ಒತ್ತಾಯಪಡಿಸಿರುವರು

ಉಡುಪಿ 4— 20 ಸದಸ್ಯರ ನಗರ ಸಭೆಗೆ ಅಕ್ಟೋಬರು 24 ರಂದು ಚುನಾವಣೆ ನಡೆಯುವುದು.

ಇಂಡೋನೇಷಿಯಾದಲ್ಲಿ ಭಾರತ ರಾಯಭಾರಿ ಕಚೇರಿಮೇಲೆ ಧಾಳಿ

ಜಕರ್ತ 4— ಅನೇಕ ಸಾವಿರ ಮಂದಿ ಇಂಡೋನೇಷಿಯನ್ನರು ಭಾರತ ರಾಯಭಾರಿ ಕಚೇರಿಯ ಮೇಲೆ ಧಾಳಿ ನಡೆಸಿ ಟೇಬಲ್ ಕುರ್ಚಿ ಇತ್ಯಾದಿಗಳನ್ನೆಲ್ಲಾ ಒಡೆದು, ಕಿಟಕಿಬಾಗಿಲುಗಳನ್ನೆಲ್ಲಾ ಮುರಿದರು ; ಹೊರಗೆ ಪ್ರದರ್ಶನ ನಡೆಸುತ್ತಿದ್ದವರು ಉದ್ದೇಶಪೂರ್ವಕವಾಗಿ ಕಲ್ಲು ಬೀರಿದರು— ಏಷ್ಯಾಕ್ರೀಡಾ ಫೆಡರೇಷನ್ನಿನ ಸಮಿತಿಯಲ್ಲಿ ಭಾರತ ಉಪಾಧ್ಯಕ್ಷ ಶ್ರೀ ಸೋಂಧಿಯವರ ನಿಲುವಿನ ಪ್ರತಿಭಟನೆಗಾಗಿ.

ಜಕರ್ತ 4 — ಇಂಡೋನೇಷಿಯಾ ಸರಕಾರದ ಸೂಚನೆಯಂತೆ ಶ್ರೀ ಸೋಂಧಿಯವರು ನಿನ್ನೆ ರಾತ್ರೆ ಜಕರ್ತಾದಿಂದ ಹೊರಟುಹೋದರೆಂದು ಕ್ರೀಡಾ ಮಂತ್ರಿ ಶ್ರೀ ಮುಲಾಡಿ ಹೇಳಿರುವರು.

ನವದೆಹಲಿ 4— ನಿನ್ನೆ ಜಕರ್ತಾದಲ್ಲಿ ಭಾರತ ರಾಯಭಾರಿ ಕಚೇರಿ ಮೇಲೆ ಭಾರಿ ಗುಂಪಿನಿಂದ ನಡೆದ ಭೀಕರ ಧಾಳಿಯಲ್ಲಿ ಚೀನೀಯರ ಕೈವಾಡವಿರಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

★

ನವದೆಹಲಿ 4— ಈ ನೇರ ತಿಂಗಳಿನೀಚೆಗೆ ಲಡಕ್‌ನಲ್ಲಿ ಚೀನೀಯರು 35 ಹೊಸ ಠಿಕಾಣೆಗಳನ್ನು ಸ್ಥಾಪಿಸಿರುವರು ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

o o

ನವದೆಹಲಿ 4— ರೈಲ್ವೆಗಳಲ್ಲಿ ಪ್ರಯಾಣಿಕರಿಗೆ ಪೋರ್ಟರು ಕೆಲಸ ಸರಿಯಿಲ್ಲವೆಂದೂ, ಅವರಿಗೆ ಅದಕ್ಕೆ ಬಲವೂ ಸಾಲದು ಮತ್ತು ಅವರಿಂದ ರಾತ್ರೆ ಕೆಲಸ ಮಾಡಿಸುವುದೂ ಸರಿಯೂ ಅಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

o o

ಬೊಂಬಾಯಿ 4— ಒಂದು ಪ್ರಯಾಣಿಕ ಹಡಗಿನಲ್ಲಿಯೂ ನಾವಿಕರಲ್ಲಿ 13 ಮಂದಿಯಿಂದ ರೂ 15 ಲಕ್ಷ ಬೆಲೆಬಾಳುವ 135 ಕಿಲೊಗ್ರಾಂ ಚಿನ್ನವನ್ನು ಕಳ್ಳಂಸಿ ನವನ್ನು ವಶಪಡಿಸಿಕೊಂಡರು.

ಸ್ಮಾರಸ್ಯ ಘಟನೆ

ದೇವ್ ಆನಂದ್ ನ್ಯೂಯಾರ್ಕಿನಲ್ಲಿ ಭಾರತೀಯ ಉಪಾಹಾರ ಗೃಹದಲ್ಲಿ ಊಟಕ್ಕೆ ಕುಳಿತಿದ್ದಾಗ ಪಕ್ಕನೆ ಅಲ್ಲಿ ಭಾರತೀಯ ಹಾಡೊಂದನ್ನು ಕೇಳಿ ಚಕಿತನಾದನು : ಹಾಡೂ ಪರಿಚಿತವಾದುದೇ ಆಗಿತ್ತು : ಆ ಹಾಡನ್ನು 25 ವರ್ಷಗಳ ಹಿಂದೆ ಬಿಡುಗಡೆಗೊಂಡಿದ್ದ ಹಿಂದೀ ಚಿತ್ರವೊಂದರಲ್ಲಿ ಅಶೋಕ್ ಕುಮಾರ್ ಹಾಡಿದ್ದನು : ಭ್ರಾಂತಕ್ಕೆ ಮಂಳಿದ ದೇವ್ ಆನಂದ್ ಆ ಹಾಡನ್ನು ಜ್ಞಾಪಿಸಿ ಹೊಟ್ಟೆಶುಂಬಾ ನಗುತ್ತಾನೆ : ಈ ವಿಷಯವದ್ದು ಅಶೋಕ್‌ನೊಡನೆ ಹೇಳಿದೆ ದೇವ್‌ನಿಗೆ ಸಮಾಧಾನವಿಲ್ಲವಂತೆ !

ಪುಂದರದಾಸರು ಕಂಡ ಲೋಕದ ರೀತಿನೀತಿಗಳು

— ಸ್ಥಿತಪ್ರಜ್ಞನಾಗಲು ಪ್ರಯತ್ನಿಸು —

ಬಂದ ಕಷ್ಟಗಳೆಲ್ಲವನ್ನೂ ತಾಳಿಕೊಂಡು, ಬಲು ಸಂತೋಷಬಂದಲ್ಲಿ ತಿಳಿದವರೊಡನೆ ಕೇಳಿ ಅದನ್ನು ನಿವಾರಿಸಿಕೊಳ್ಳಬೇಕು ; ನಿಂದಾಸ್ತುತಿಗಳನ್ನು ತಾಳಿಕೊಂಡು ದೇವರು ನಮ್ಮವನೆಂದು ಹೇಳಿಕೊಳ್ಳಬೇಕು ; ದೇವರನ್ನು ತಮ್ಮವರಿಗಿಂದ ಮೆಚ್ಚಿ, ಕ್ರೋಧರೂಪದ ಮಾಯೆಯನ್ನು ಸಂಹರಿಸಿ, ಅನಂತತೀರ್ಥದ ಪಾದವೇ ಹೆಚ್ಚೆಂದು ಪರಿಗಣಿಸಿ, ಮಾಯಾವಾದಿಗಳ ಮತಕ್ಕೆ ಬೆಂಕಿಹಚ್ಚಬೇಕು, ಪರನಾರಿಯರ ಆಸೆಯನ್ನು ಬಿಟ್ಟು, ಪರಮಾತ್ಮನ ಧ್ಯಾನವನ್ನು ಮಾಡಬೇಕು ಮತ್ತು ಹರಿಯು ಸರ್ವೋತ್ತಮನೆಂದು ಕೊಂಡಾಡಿ ದೇವರ ಮೂರ್ತಿಯನ್ನು ನೋಡಬೇಕು. ' ದೇವರನ್ನು ನಂಬಿದ ದಾಸರು ತಮಗೆ ಕೊಟ್ಟವರೂ ಕೊಡದವರೂ ಒಂದೇ ' ಎಂದು ತಿಳಿಯುತ್ತಾರೆ : ಬೇರೆಯವರು ರಾಜರಾದರೂ ತಿರುಕರಾದರೂ ಅವರಿಗೊಂದೇ ? ಸರಸದಿಂದ ಆಡಿದರೂ ವಿಷದಿಂದ ಆಡಿದರೂ ವಿಷದಿಂದ ಆಡಿದರೂ ಅವರು ಖಿನ್ನರಾಗರು. ಹುಟ್ಟಿಸಿದ ದೇವರು ಹೊಟ್ಟೆಗೆ ಕೊಡದೆ ಇರುವುದಿಲ್ಲ ಎಂದು ಅವರು ದೃಢವಾಗಿ ನಂಬಿರುತ್ತಾರೆ

✶

ಸಾಹುಕಾರ— ನನ್ನ ವಿಲ್ಲಿನಲ್ಲಿ ಒಂದು ವಿಷಯ ಸೇರಿಸಿ ; ನನ್ನಲ್ಲಿ 20 ವರ್ಷ ಕೆಲಸ ಮಾಡಿರುವವರಿಗೆ 50 ಸಾವಿರ ಬೋನಸ್ಸು, ಎಂದು ಸೇರಿಸಿ.

ಲಾಯರ್— ನೀವು ವ್ಯಾಪಾರ ನಡೆಸುತ್ತಿರುವುದು ಇನ್ನೂ ಹತ್ತು ವರ್ಷಗಳಿಂದ ಮಾತ್ರವಲ್ಲ !

ಸಾಹುಕಾರ— ಹೌದು, ಅದು ನನಗೆ ಗೊತ್ತು : ಆದರೆ ಇದು ಒಳ್ಳೇ ಪ್ರಚಾರ !

SHAKTI SUDHA

A Superb Tonic

For Quality Printing
L. N. Press
Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ
ಅ ಶೋ ಕಾ ಫಾರ್ಮಸಿ
ಅಶೋಕಾ ಬಜಾರ್, ಮೈಸೂರು

ವುಡ್‌ಲಾಂಡ್ಸ್

31-8-62 ರಿಂದ ಅಮೋಘ ಆರಂಭ

ನಯಿ ಮಾ (ಹಿಂದಿ) NAI MAA

ಪಾತ್ರ— ಬಾಲರಾಜ್ ಸಹಾನಿ, ಶ್ಯಾಮ, ಡೈಸಿ ಇರಾನಿ, ಪೀಸ್ ಕನಿವಾಲ್

ಸಕಲರೂ ನೋಡಿ ಆನಂದಿಸಬೇಕಾದ ಅಮೋಘ ಸಾಂಸಾರಿಕ ಚಿತ್ರ

ದಿನವಹಿ 3 ಪ್ರದರ್ಶನಗಳು

ಆಪೆರಾ— ಕೀರ್ತಿಯುತ 4 ನೇ ವಾರ

ಧರ್ಮನಳ ಮಹಾತೆ [ಕನ್ನಡ]

ತಾರಾಗಣ — ಪ್ರತಿಮಾದೇವಿ, ಅಂಬುಜಾಡಿಕ್ಕಿ ಮಾಧವರಾವ್

ದಿನವಹಿ 3 ಆಟಗಳು



ಅಮೋಘಕಾಕ್ಕೆ ಭೇಟಿ ಸಂಬಂಧದ ಚಿತ್ರಗಳು

Edited, Printed & Published by the Proprietor, Dharma Prachara Nirata M. S. Krishna Rao, at the Savadi Press, Chamarajapuram, Mysore. 4